ಯುವಕ ತನ್ನ ಪ್ರಯತ್ನದಲ್ಲಿ ವಿಫಲನಾಗಿ, ಗಾಯಗೊಳ್ಳುತ್ತಾನೆ. ಕೊಲ್ಲಲು ಬಂದ ವ್ಯಕ್ತಿಯಿಂದಲೇ ಶುಶ್ರೂಷೆಗೆ ಒಳಗಾಗುತ್ತಾನೆ. ಚಲಿಸಲಾಗದಂಥ ಸ್ಥಿತಿಯಲ್ಲಿ ಪ್ರೊಫೆಸರರ ಮನೆಯಲ್ಲಿ ಬಂಧನದ ರೂಪದಲ್ಲಿ ಉಳಿಯಬೇಕಾದ ಅನಿವಾರ್ಯತೆಯಲ್ಲಿ ಕೊಲೆಗಾರ ಹೊಸತೊಂದು ಲೋಕವನ್ನು ಕಾಣುತ್ತಾನೆ. ಸಾಹಿತ್ಯದ ನೆಪದಲ್ಲಿ ಉಸಿರಾಡುವ ಸಹೃದಯರ ಸಾಂಗತ್ಯ ಕೊಲೆಗಾರನ ಮನಸ್ಸಿನಲ್ಲಿ ಮಾನವೀಯ ಸ್ಪಂದನಗಳನ್ನು ಏಳಿಸುತ್ತದೆ. ಬಂದೂಕು ಹಿಡಿವ ಕೈಗೆ ಪುಸ್ತಕ ಹಿತವೆನ್ನಿಸುವ ವೇಳೆಗೆ, ಬೇರೆ ಕೈಗಳಿಂದ ಪ್ರೊಫೆಸರ್ ಕೊಲೆಯಾಗುತ್ತಾರೆ. ಆದರೆ, ಕೊಲೆ ಮಾಡಲು ಬಂದು ಬದಲಾದ ಯುವಕ ಪ್ರೊಫೆಸರರ ತತ್ವಗಳ ವಾರಸುದಾರನಾಗುತ್ತಾನೆ. ಕಥೆಯ ಹೊಳಪನ್ನು ಹೆಚ್ಚಿಸಿರುವ ಈ ಬದಲಾವಣೆ ಸಾಹಿತ್ಯದ ಜೀವಶಕ್ತಿಯನ್ನು ಸೂಚಿಸುವಂತಿದೆ.

‘ಸಂಘಣ್ಣ’, ‘ಸ್ವಚ್ಛಭಾರತಿ’, ‘ಗಂಡು ಪಿಶಾಚಿ’ ಸೇರಿದಂತೆ ಸಂಕಲನದ ಎಲ್ಲ ಕಥೆಗಳೂ ವರ್ತಮಾನದ ಕ್ಷೋಭೆಗಳನ್ನು ಕಾಣಿಸುವಂತಿವೆ ಹಾಗೂ ಆ ಕ್ಷೋಭೆಗಳಿಗೆ ಸಾಹಿತ್ಯದ ಮೂಲಕ ಉತ್ತರದ ಬೆಳಕಂಡಿಗಳನ್ನು ಹುಡುಕಿಕೊಳ್ಳಲು ಒತ್ತಾಯಿಸುತ್ತಿವೆ. ವರ್ತಮಾನದೊಂದಿಗಿನ ನೇರ ಅನುಸಂಧಾನದ ಕಾರಣದಿಂದಾಗಿ ಮೀರಾ ಅವರ ಕಥೆಗಳು ಕೆಲವೊಮ್ಮೆ ವಾಚ್ಯವೆನ್ನಿಸಿದರೂ, ಪ್ರಯೋಗದ ರೂಪದಲ್ಲಿ ಹಾಗೂ ವರ್ತಮಾನಕ್ಕೆ ಸೃಜನಶೀಲ ಬರಹಗಾರರೊಬ್ಬರ ಸ್ಪಂದನದ ರೂಪದಲ್ಲಿ ಮುಖ್ಯವೆನ್ನಿಸುತ್ತವೆ.

ನೆರೆಭಾಷೆಯ ಕಥೆಗಾರ್ತಿಯ ಭಾವಲೋಕವನ್ನು ಅಂದಗೆಡದಂತೆ, ಪರಿಣಾಮ ಕುಂದದಂತೆ ವಿಕ್ರಂ ಕಾಂತಿಕೆರೆ ಕನ್ನಡಕ್ಕೆ ತಂದಿದ್ದಾರೆ.


**ಭಗವಂತನ ಸಾವು; ಲೇ: ಕೆ.ಆರ್. ಮೀರಾ; ಅ: ವಿಕ್ರಂ ಕಾಂತಿಕೆರೆ; ಪು: 96; ಬೆ: ರೂ. 150; ಪ್ರ: ಬಹುರೂಪಿ, ಬೆಂಗಳೂರು. ಫೋನ್: 7019182729.**

---

# ಮಳೆ ಪ್ರಬಂಧಗಳು

**ಸೂರ್ಯಕೀರ್ತಿ** ಕಾವ್ಯದ ಕಡುಮೋಹಿ. ಈವರೆಗೆ ಮೂರು ಕವನ ಸಂಕಲನಗಳನ್ನು ಪ್ರಕಟಿಸಿರುವ ಅವರು, ಇದೀಗ ‘ಮಳೆ ಪ್ರಬಂಧಗಳು’ ಮೂಲಕ ಪ್ರಬಂಧಕಾರರಾಗಿ ಸಹೃದಯರಿಗೆ ಮುಖಾಮುಖಿಯಾಗಿದ್ದಾರೆ.

ಕನ್ನಡ ಸಾಹಿತ್ಯವನ್ನು ಮಳೆ ಹಲವು ರೂಪಗಳಲ್ಲಿ ಆವರಿಸಿಕೊಂಡಿದೆ. ಕಥೆ, ಕವಿತೆ, ಕಾದಂಬರಿ ಸೇರಿದಂತೆ ಹಲವು ಪ್ರಕಾರಗಳಲ್ಲಿ ಮಳೆರೂಪಕ ಮತ್ತೆ ಮತ್ತೆ ಬಳಕೆಯಾಗುತ್ತಿದೆ. ಅದೇ ಮಳೆ ಸೂರ್ಯಕೀರ್ತಿ ಅವರಿಗೆ ಪ್ರಬಂಧ ರೂಪದಲ್ಲಿ ಒಲಿದಿದೆ. ‘ಮತ್ತೆ ಮಳೆ ಹುಯ್ಯುತಿದೆ, ಎಲ್ಲ ನೆನಪಾಗುತ್ತಿದೆ’ ಎನ್ನುವ ಯು.ಆರ್. ಅನಂತಮೂರ್ತಿ ಅವರ ಕವಿತೆಯ ಸಾಲನ್ನು ಸೂರ್ಯಕೀರ್ತಿ ಅವರ ಪ್ರಬಂಧಗಳು ಜೀವಗೊಳಿಸುವಂತಿವೆ. ಬಾಲ್ಯದ ಸ್ಮೃತಿಗಳ ಹನಿಮಳೆಯ ರೂಪದಲ್ಲಿ, ಮನಸ್ಸಿನಲ್ಲಿ ಈಗಲೂ ಉಳಿದಿರುವ ಮಳೆಯ ಆರ್ದ್ರತೆಯ ನೇವರಿಕೆಯ ರೂಪದಲ್ಲಿ ಇಲ್ಲಿನ ಪ್ರಬಂಧಗಳನ್ನು ನೋಡಬಹುದಾಗಿದೆ.




ಈ ಸಂಕಲನ ಒಂಬತ್ತು ಪ್ರಬಂಧಗಳನ್ನು ಸೂತ್ರ ರೂಪದಲ್ಲಿ ಹಿಡಿದಿಟ್ಟಿರುವ ಅಂಶ ಮಳೆ. ಸಂಕಲನದ ಪ್ರಬಂಧಗಳಲ್ಲಿ ಬೇರೆ ಬೇರೆ ರೂಪದಲ್ಲಿ, ಬೇರೆ ಬೇರೆ ಪ್ರಮಾಣದಲ್ಲಿ ಕಾಣಿಸಿಕೊಂಡಿರುವ ಮಳೆ, ಸಹೃದಯರ ಎದೆಗಳನ್ನೂ ಒದ್ದೆಯಾಗಿಸುವಂತಿದೆ.

ಸೂರ್ಯಕೀರ್ತಿ ಅವರ ಪ್ರಬಂಧಗಳು ಗ್ರಾಮ ಜೀವನದ ಬಿಡಿ ಬಿಡಿ ಚಿತ್ರಗಳಂತಿವೆ. ಅದೇ ಕಾಲಕ್ಕೆ, ಪ್ರಬಂಧಕಾರರ ಆತ್ಮಕಥನದ ತುಣುಕುಗಳಂತೆಯೂ ಓದಿಸಿಕೊಳ್ಳುತ್ತವೆ.